ಅಂದು ಭಾನುವಾರ. ಕೇಶವನ ಅಂಗಡಿಗೆ ರಜ. ಬೆಂಗಳೂರಿನಿಂದ ತನ್ನ ಸ್ವಂತ ಊರಿಗೆ ಹೋಗಲೆಂದು ಬಸ್ಸು ಹತ್ತಿ ಕುಳಿತಿದ್ದ ಕೇಶವನಿಗೆ ವಿಷಯವನ್ನು ತನ್ನ ಅಣ್ಣ ಅತ್ತಿಗೆಗೆ ಹೇಗೆ ಹೇಳುವುದೆಂದು ತಿಳಿಯದೆ ಕಳವಳವಾಗಿತ್ತು. ಆದರೆ, ಅದನ್ನು ಹೇಳಲೇಬೇಕೆಂದು ಅವನು ಗಟ್ಟಿ ನಿರ್ಧಾರ ಮಾಡಿಕೊಂಡು ಹೊರಟಿದ್ದ. ಊರಿಗೆ ಹೋದ ಮೇಲೆ ಹೇಗೋ ಹೇಳಿದರಾಯಿತು ಎಂದು ಹೆಚ್ಚು ಯೋಚಿಸದೇ ಅವನು ತಲೆಯಿಂದ ಆ ವಿಷಯವನ್ನು ತೆಗೆದು ಹಾಕಿ ಕಿಟಕಿಯಿಂದ ಹೊರಗೆ ನೋಡುತ್ತಾ ಕುಳಿತ. ಆದರೂ ಅವನು ಏನೇ ಪ್ರಯತ್ನ ಮಾಡಿದರೂ ಅವನ ಮನದಲ್ಲೊಂದು ಅಪರಾಧಿ ಭಾವ ಕಾಡಿಸುತ್ತಲೇ ಇತ್ತು. ನಾನೇನು ಯಾರೂ ಮಾಡದ ತಪ್ಪು ಮಾಡಿಲ್ಲ. ಕಾಲ ಕಾಲಕ್ಕನುಗುಣವಾಗಿ ಎಲ್ಲರೂ ಅವರ ನಿರ್ಧಾರಗಳನ್ನು ಬದಲಿಸಿಕೊಳ್ಳಲೇಬೇಕು ಎಂಬ ವಿತಂಡವಾದವೊಂದು ಅವನ ಮನಸ್ಸಿನಲ್ಲಿ ಮೂಡಿ ತುಸು ನಿರಾಳವಾಯಿತು. ಮೂರು ವಾರಗಳಿಂದ ಊರಿಗೆ ಹೋಗಿ ಅಣ್ಣಅತ್ತಿಗೆಯರಿಗೆ ವಿಷಯ ತಿಳಿಸಬೇಕೆಂದು ಎಷ್ಟೇ ದೃಢ ನಿರ್ಧಾರ ತೆಗೆದುಕೊಂಡರೂ ಯಾಕೋ ಏನೋ ಧೈರ್ಯ ಸಾಲದೇ ಪ್ರತಿ ವಾರವೂ ಊರಿಗೆ ಹೋಗುವುದನ್ನು ಮುಂದೂಡಿದ್ದ. ಅವನ ಹೆಂಡತಿ ಲಕ್ಷ್ಮಿ ಇನ್ನೇನು ಸ್ಕೂಲು ಪ್ರಾರಂಭವಾಗುತ್ತದೆ, ಊರಿಗೆ ಹೋಗಿ ವಿಷಯ ತಿಳಿಸಿ ಬಂದುಬಿಡಿ ಎಂದು ದಿನವೂ ರಾತ್ರಿ ಮಲಗುವಾಗ ಒತ್ತಾಯ ಮಾಡಿ ಮುಖ ಚಿಕ್ಕದು ಮಾಡಿಕೊಂಡು ಮಲಗುತ್ತಿದ್ದಳು.

ಕುಣಿಗಲ್ಲಿನಲ್ಲಿ ಬಸ್ಸು ಇಳಿದು ನಿಲ್ದಾಣದಲ್ಲಿ ತನ್ನ ಊರಾದ ವಸಂತಪುರಕ್ಕೆ ಹೋಗುವ ಬಸ್ಸಿಗಾಗಿ ಕಾಯುತ್ತಿದ್ದರೂ ಅವನ ಮನಸ್ಸಿನಲ್ಲಿ ಯಾಕೋ ಏನೋ ಅವ್ಯಕ್ತ ಹಿಂಜರಿಕೆಯೊಂದು ನೆಲೆಯೂರಿತ್ತು. ಯಡಿಯೂರಿಗೆ ಹೋಗುವ ಸೆಟಲ್ ಬಸ್ಸು ಬಂದ ಮೇಲೆ ಹತ್ತಿ ವಸಂತಪುರಕ್ಕೆ ಟಿಕೇಟು ತೆಗೆದುಕೊಂಡು ಖಾಲಿ ಇದ್ದ ಸೀಟೊಂದರಲ್ಲಿ ಕುಳಿತುಕೊಂಡ. ಊರಿನ ಕೆಲವೊಬ್ಬರು ಅವನನ್ನು ಕಂಡು ಯೋಗಕ್ಷೇಮ ವಿಚಾರಿಸಿ ಮಾತಿಗೆ ಇಳಿದರೂ ಅವರೊಂದಿಗೆ ಮಾತು ಮುಂದುವರಿಸುವ ಉತ್ಸಾಹವಿರದೇ ಸುಮ್ಮನೆ ಹ್ಞೂಂ ಚೆನ್ನಾಗಿದೀನಿ ಎಂದಷ್ಟೇ ಹೇಳಿ ಮಾತು